UDAYAVANI – 24/9/2010

# ಅಡ್ಯಾರು: ಸಹ್ಯಾದ್ರಿಯಲ್ಲಿ ವಿಚಾರಸಂಕಿರಣ

ಮಂಗಳೂರು, ಸೆ. 23: ಭಾರತ ದೇಶವು ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಗತಿಪಥದಲ್ಲಿದೆ. ಮುಂದೊಂದು ದಿನ ಭಾರತವು ಏಷ್ಯಾಖಂಡ ಮಾತ್ರವಲ್ಲದೆ, ಇಡೀ ಜಗತ್ತಿಗೆ, ಆರ್ಥಿಕ ವಿದ್ಯಮಾನದ ಮಾದರಿ ರಾಷ್ಟ್ರವಾಗಲಿದೆ ಎಂದು ಐ.ಐ.ಎಂ. ಬೆಂಗಳೂರಿನ ಪ್ರೊ| ರಾಜೀವ್ ಗೌಡ ಅವರು ಹೇಳಿದರು.

ಅಡ್ಯಾರಿನಲ್ಲಿರುವ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನಲ್ಲಿ ನಡೆದ ವಿಚಾರಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡಿದ ಪ್ರೊ| ಗೌಡ ಅವರು, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಬೋಧನ ವಿಧಾನಗಳು ಹೇಗೆ ಪೂರಕವಾಗಿರಬೇಕೆಂದು ಅಧ್ಯಾಪಕರೊಂದಿಗೆ ಸಂವಾದ ನಡೆಸಿದರು.

ಭಂಡಾರಿ ಪ್ರತಿಷ್ಠಾನದ ಅಧ್ಯಕ್ಷ ಮಂಜುನಾಥ ಭಂಡಾರಿ ಮತ್ತಿತರರು ಉಪಸ್ಥಿತರಿದ್ದರು.